

## ಹಿಂದಿಗಿಂತ ಏಕೆ ಭಿನ್ನ?

ಇಪ್ಪತ್ತೊಂದನೇ ಶತಮಾನದ ಮದುವೆಗಳಲ್ಲಿ ಏನಾಗುತ್ತಿದೆ?

ಒಟ್ಟು ಕುಟುಂಬಗಳಿಂದ ದೂರಾಗಿ ಬದುಕುವ ಹೆಚ್ಚಿನ ದಂಪತಿಗಳಿಗೆ ದುಡಿಯುವ, ಮನೆಗೆಲಸ ಮಾಡಿಕೊಳ್ಳುವ, ಮಕ್ಕಳನ್ನು ನಿಭಾಯಿಸುವ ಸಾಮಾಜಿಕ ಕೌಟುಂಬಿಕ ಸಂಬಂಧಗಳನ್ನು ಉಳಿಸಿಕೊಳ್ಳುವ ಹಲವಾರು ರೀತಿಯ ಒತ್ತಡಗಳಿರುತ್ತವೆ. ಯಾವುದೇ ಒಂದು ವಿಚಾರದಲ್ಲಿ ಬರುವ ಭಿನ್ನಾಭಿಪ್ರಾಯ ಸಂಬಂಧದ ಎಲ್ಲಾ ಪದರಗಳಿಗೂ ಹರಡಿಕೊಳ್ಳುತ್ತದೆ. ಒತ್ತಡಗಳ ಮಧ್ಯೆ ದಂಪತಿಗಳಿಗೆ ತಮ್ಮ ನಡುವೆ ಪ್ರೀತಿಯನ್ನು, ಲೈಂಗಿಕ ಸುಖವನ್ನು ಹಂಚಿಕೊಳ್ಳಲು ಸಿಗುವ ಸಮಯ ಕಡಿಮೆಯಾಗುತ್ತಿದೆ. ಹಾಗಾಗಿ ಗೊತ್ತಿಲ್ಲದಂತೆಯೇ ಅವರಿಬ್ಬರ ನಡುವಿನ ದೂರ ಹೆಚ್ಚುತ್ತಿರುತ್ತದೆ.

ಹಿಂದೆಲ್ಲಾ ಉಡಲು ಉಣ್ಣಲು ಕೊರತೆಯಿಲ್ಲದಿದ್ದಾಗ ಮತ್ತು ದೈಹಿಕ ಹಿಂಸೆ ನಡೆಯದಿದ್ದಾಗ ಇತರ ವಿಚಾರಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡದೆ ಸಂಸಾರ ತೂಗಿಕೊಂಡು ಹೋಗುತ್ತಿತ್ತು. ಆದರೆ ಇವತ್ತಿನ ಯುವಜನತೆ ಅದರಲ್ಲೂ ಹೆಚ್ಚಾಗಿ ಯುವತಿಯರು ಒಂದು ಆತ್ಮಗೌರವದ ಬದುಕನ್ನು ನಿರೀಕ್ಷಿಸುತ್ತಿದ್ದಾರೆ. ಸಮಾನತೆ, ಪರಸ್ಪರ ಗೌರವ, ಆತ್ಮೀಯತೆ, ಸಾಂಗತ್ಯ, ಲೈಂಗಿಕ ತೃಪ್ತಿ ಎಲ್ಲವೂ ಇವತ್ತಿನ ವಿವಾಹಗಳ ಮೂಲಭೂತ ಅಗತ್ಯಗಳಾಗಿವೆ. ನಮ್ಮ ಪೋಷಕರು ಮತ್ತು ಸಾಕಷ್ಟು ಯುವಕರು ಈ ಬದಲಾವಣೆಗಳಿಗೆ ಮಾನಸಿಕವಾಗಿ ಸಿದ್ಧರಾಗಬೇಕಾಗಿದೆ.

ಮತ್ತು ಅವಳ ತಾಯಿಯ ಮಾತುಗಳಲ್ಲಿ ವಿವಾಹದ ಬಗೆಗಿನ ದೃಷ್ಟಿಕೋನದಲ್ಲಿನ ತಲೆಮಾರಿನ ಅಂತರ ಸ್ಪಷ್ಟವಾಗಿ ಕಾಣುತ್ತಿತ್ತು. ಹಳೆಯ ತಲೆಮಾರಿನವರಂತೆ ಇಂದಿನವರು ಋಣಾನುಬಂಧಕ್ಕೆ ಮಹತ್ವ ನೀಡುತ್ತಿಲ್ಲ. ಸಿನಿಮಾ ಸಾಹಿತ್ಯಗಳಲ್ಲಿ ತೋರಿಸುವಂತೆ ಮದುವೆಯನ್ನು ಜನ್ಮಾಂತರದ ಸಂಬಂಧ ಅಥವಾ ಅಳಿಸಲಾಗದ ಪ್ರೇಮಬಂಧ ಎಂದೂ ಒಪ್ಪಿಕೊಳ್ಳುತ್ತಿರುವಂತೆ ಕಾಣುವುದಿಲ್ಲ. ಹಲವಾರು ವರ್ಷ ಪ್ರೇಮಿಸಿ ಮದುವೆಯಾದವರಲ್ಲಿಯೂ ಭಿನ್ನಾಭಿಪ್ರಾಯಗಳು ಯಾವಾಗ ಬೇಕಾದರೂ ನಂಟನ್ನು ಕಳಚುತ್ತವೆ. ಅಹಿತಕರ ವಿವಾಹದಲ್ಲಿ ತೊಳಲಾಡುವುದಕ್ಕಿಂತ ಏಕಪೋಷಕರಾಗಿ ಜೀವನವನ್ನು ಎದುರಿಸಲು ಇವತ್ತಿನ ಸಾಕಷ್ಟು ಯುವತಿಯರು ಹಿಂಜರಿಯುತ್ತಿಲ್ಲ.

ಹಳೆಯ ತಲೆಮಾರಿನ ನಿರಾಶಾವಾದಿಗಳು ಹೇಳುವಂತೆ ವೈವಾಹಿಕ ವ್ಯವಸ್ಥೆಯೇ ಕುಸಿದು ಬೀಳುತ್ತಿದೆಯೇ? ಇವೆಲ್ಲವನ್ನೂ ಕೇವಲ ತಲೆಮಾರಿನ ಅಂತರ ಎಂಬ ಮಾಮೂಲಿ ಸಬೂಬಿನಿಂದ ಕಡೆಗಣಿಸುವುದು ಸಾಧ್ಯವೇ? ಅಥವಾ ಎಲ್ಲದಕ್ಕೂ ಭಾರತೀಯ ಸಂಸ್ಕೃತಿಯ ತಿರಸ್ಕಾರ, ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆ, ಇಂದಿನ ಯುವಜನರ ಬೇಜವಾಬ್ದಾರಿ, ಸಿನಿಮಾ ಅಂತರ್ಜಾಲಗಳ ಪ್ರಭಾವ, ಸ್ತ್ರೀಯರಿಗೆ ಸಿಗುತ್ತಿರುವ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆ–ಮುಂತಾದ ಸಾರಾಸಗಟಾದ ಕಾರಣಗಳನ್ನು ಹುಡುಕಿಕೊಂಡು ಯಾರು ಯಾರ ಮೇಲೋ ಗೂಬೆ ಕೂರಿಸುವುದು ಪರಿಹಾರವೇ? ಜಾಗತೀಕರಣಗೊಂಡ 21ನೇ ಶತಮಾನದಲ್ಲಿಯೂ ನಾವು ಇಪ್ಪತ್ತನೇ ಶತಮಾನದ ನೀತಿ ನಿಯಮ ಕಲ್ಪನೆ ಆದರ್ಶಗಳನ್ನು ಇಟ್ಟುಕೊಂಡು ವೈವಾಹಿಕ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ವಿಫಲ ಪ್ರಯತ್ನ ನಡೆಸುತ್ತಿದ್ದೇವೆಯೇ?

ಕಳೆದ ಶತಮಾನದವರೆಗೆ ಧಾರ್ಮಿಕ ಕಟ್ಟುಪಾಡುಗಳು, ವಿಚ್ಛೇದಿತರು ಎಂಬ ಹಣೆಪಟ್ಟಿಗೆ ಅಂಟಿಕೊಳ್ಳುತ್ತಿದ್ದ ಸಾಮಾಜಿಕ ಕಳಂಕದ ಭೀತಿ, ಸ್ತ್ರೀ ಪುರುಷರಲ್ಲಿನ ಆರ್ಥಿಕ ಅಸಮಾನತೆ, ಪುರುಷರ ಮೇಲುಗೈಯನ್ನು ಒಪ್ಪಿಕೊಂಡಿದ್ದ ಸ್ತ್ರೀಯರ ಮನೋಧರ್ಮ ಮುಂತಾದ ಅಂಶಗಳು ವಿವಾಹಗಳನ್ನು ಹಿಡಿದು ನಿಲ್ಲಿಸುತ್ತಿದ್ದವು. ಆಗ ವಿಚ್ಛೇದನಗಳು ಆಗುತ್ತಿರಲಿಲ್ಲ ಎನ್ನುವುದರ ಆಧಾರದ ಮೇಲೆ




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು



ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450